ವಿಷಯ : - ಎಸ್.ಸಿ.ಎಸ್.ಟಿ ಹಾಸ್ಟೆಲುಗಳಿಗೆ ಅಡಿಗೆಯವರನ್ನು ಮತ್ತು ಅಡಿಗೆ ಸಹಯಕರ ಹುದ್ದೆಗಳ ನೇಕಾತಿಯ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 151(427)

ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಜ್ಯದಲ್ಲಿ ಹರಿಜನ ಗಿರಿಜನರ ಹಾಸ್ಟೆಲ್‌ಗಳಲ್ಲಿ ಅಡಿಗೆ ಮಾಡುವವರ ಮತ್ತು ಅಡಿಗೆ ಸಹಾಯಕರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆಯೇ?

(ಆ) ಈ ಹುದ್ದೆಗಳನ್ನು ಮಂಜೂರು ಮಾಡಿದ್ದಲ್ಲಿ ಎಷ್ಟು ಹಾಸ್ಟೆಲ್‌ಗಳಿಗೆ (ಪ್ರೀ ಮೆಟ್ರಿಕ್ ಹಾಗೂ ಪೋಸ್ಟ್ ಮೆಟ್ರಿಕ್) ಮಾಡಲಾಗಿರುವುದು?

(ಇ) ಆ ಹುದ್ದೆಗಳನ್ನು ಮಂಜೂರು ಮಾಡದಿದ್ದಲ್ಲಿ ಹಾಸ್ಟೆಲ್‌ಗಳಲ್ಲಿ ಮಾಡದಿದ್ದಲ್ಲಿ ಹಾಸ್ಟೆಲ್‌ಗಳಲ್ಲಿ ಅಡಿಗೆ ಮಾಡಲು ಯಾವ ವ್ಯವಸ್ಥೆಯನ್ನು ಈಗ ಮಾಡಲಾಗಿರುವುದು?

ಶ್ರೀ ಧರ್ಮಸಿಂಗ್

(ಸಮಾಜ ಕಲ್ಯಾಣ ಸಚಿವರು)

1992-93ನೇ ಸಾಲಿನವರೆಗೆ ಮಂಜೂರು ಮಾಡಿರುವ ಎಲ್ಲಾ ವಿದ್ಯಾರ್ಥಿನಿಲಯಕ್ಕೆ ಅಡಿಗೆಯವರು ಮತ್ತು ಅಡಿಗೆ ಸಹಾಯಕರುಗಳ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

1993-94ನೇ ಸಾಲಿನಲ್ಲಿ ಮಂಜೂರಾಗಿರುವ 95 ಮೆಟ್ರಿಕ್ ಪೂರ್ವ : ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳಿಗೆ ಸಿಬ್ಬಂದಿಯನ್ನು ಸೃಷ್ಟಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

1993-94ನೇ ಸಾಲಿನಲ್ಲಿ ಮಂಜೂರಾದ 16 ಮೆಟ್ರಿಕ್‌ನಂತರದ ಹಾಗೂ 79 ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಿಗೆ ಈ ಹುದ್ದೆಗಳನ್ನು ಮಂಜೂರು ಮಾಡಲಾಗುವುದು.

ಈ ವಿದ್ಯಾರ್ಥಿನಿಲಯಗಳಿಗೆ ಮಂಜೂರಾದ ಸಿಬ್ಬಂದಿಯ ಕ್ರಮಬದ್ಧ ನೇಮಕಾತಿಯಾಗುವವರೆಗೂ ಆಗತ್ಯ ಸಿಬ್ಬಂದಿಯನ್ನು ವಿದ್ಯಾರ್ಥಿನಿಲಯದ ಕೆಲಸಕ್ಕೆ ಅಡಚಣೆಯಾಗದಂತೆ ನಿಯೋಜನೆಯ ಮೇಲೆ ನೇಮಕ ಮಾಡಿಕೊಳ್ಳಲಾಗುವುದು.

ವಿಷಯ : - ಡಾ : ಅಂಬೇಡ್ಕರ್ ಭವನ ಮತ್ತು ಬಾಬು ಜಗಜೀವನರಾಮ್‌ರವರ ಭವನಗಳನ್ನು ಕಟ್ಟುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 152(428)

ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಜ್ಯದಲ್ಲಿ 1993-94ನೇ ಸಾಲಿನಲ್ಲಿ ಕ್ಷೇತ್ರಕ್ಕೆ 1ರಂತೆ ಡಾ : ಅಂಬೇಡ್ಕರ್ ಭವನ ಕಟ್ಟಿಸುವ ಯೋಜನೆ ಇದೆಯೇ? ಹಾಗಿದ್ದಲ್ಲಿ ಇವುಗಳನ್ನು ಯಾವಾಗ ಕಟ್ಟಲಾಗುವುದು?

(ಆ) ಯಾವ ಇಲಾಖೆ ಆ ಕೆಲಸವನ್ನು ತೆಗೆದುಕೊಳ್ಳುತ್ತದೆ?

(ಇ) ಇದರಂತೆ ಬಾಬು ಜಗಜೀವನರಾಮ್ ಹೆಸರಿನ ಮೇಲೆ ಭವನಗಳನ್ನು ನಿರ್ಮಿಸಲು ಸರ್ಕಾರಕ್ಕಿರುವ ತೊಂದರೆ ಏನು?